

ಮಾನವ ಜಗತ್ತು ಕಂಡ ಬಹು ದೊಡ್ಡ ವ್ಯಸನ ಯಾವುದು? ಕುಡಿತ, ಜೂಜು, ಅಧಿಕಾರ, ಲೈಂಗಿಕಗೀಳು - ಹೀಗೆ ಪಟ್ಟಿ ಬೆಳೆಸಬಹುದು. ಆದರೆ, ಈ ಎಲ್ಲ ವ್ಯಸನಗಳನ್ನೂ ಮೀರಿಸುವಂತಿದೆ 'ಡಿಜಿಟಲ್ ವ್ಯಸನ'. ಮಕ್ಕಳು ಮತ್ತು ಆಧುನಿಕ ತಲೆಮಾರನ್ನು ಉದ್ದೇಶಿಸಿ 'ಡಿಜಿಟಲ್ ವ್ಯಸನ'ದ ಅಪಾಯಗಳ ಕುರಿತು ಚರ್ಚೆಗಳು ನಡೆಯುವುದು ಹೆಚ್ಚು. ಆದರೆ, ಈ ಗೀಳು ಹಸುಗೂಸಿನಿಂದ ಹಿಡಿದು ಹಿರಿಯ ನಾಗರಿಕರವರೆಗೆ, ಲಿಂಗಭೇದವಿಲ್ಲದೆ ಆವರಿಸಿಕೊಂಡಿದೆ. ವ್ಯಸನಕ್ಕೆ ಒಳಗಾಗಿದ್ದೇವೆ ಎನ್ನುವ ಅರಿವಿಲ್ಲದೆ ಅನೇಕರು 'ಡಿಜಿಟಲ್ ಖೆಡ್ಡಾ'ದೊಳಗೆ ಬಿದ್ದು ಪರಿತಪಿಸುತ್ತಿದ್ದಾರೆ. ಒಬ್ಬರಾದರೂ ಡಿಜಿಟಲ್ ವ್ಯಸನಿಯಿಲ್ಲದ ಮನೆಯೇ ವಿರಳ ಎನ್ನುವ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಸ್ಮಾರ್ಟ್ ಫೋನ್‌ಗಳ ಮೂಲಕ ನಮ್ಮ ಬೆರಳ ತುದಿ ವಿಶ್ವದ ಕನ್ನಡಿಯಾಗಿರುವ ಸನ್ನಿವೇಶದ ಅಡ್ಡ ಪರಿಣಾಮಗಳಲ್ಲಿ 'ಡಿಜಿಟಲ್ ವ್ಯಸನ' ಮುಖ್ಯವಾದುದಾಗಿದೆ. ವಿಶ್ವವನ್ನು ಬಾಧಿಸುತ್ತಿರುವ ಹೊಸಗಾಲದ ಅಪಾಯಕಾರಿ ವ್ಯಸನದ ಬಹುರೂಪಗಳನ್ನು ಚರ್ಚಿಸುವ, ಅಧ್ಯಯನವನ್ನು ಆಧರಿಸಿದ ಈ ವಿಸ್ತೃತ ವಿಶ್ಲೇಷಣೆ, ಡಿಜಿಟಲ್ ಗೀಳಿನ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ, ಅದರಿಂದ ಹೊರಬರುವ ದಾರಿಗಳತ್ತ ಗಮನಸೆಳೆಯುವ ಪ್ರಯತ್ನವನ್ನೂ ಮಾಡಿದೆ.

■ ನೇಮಿಚಂದ್ರ